# ಕರಾವಳಿ ಸುದ್ದಿ

ಅರಿವಿನತ್ತ ನಮ್ಮ ಚಿತ್ತ | KARAVALI SUDDI ENGLISH-KANNADA WEEKLY | ವಾರ ಪತ್ರಿಕೆ

Vol: 12 Issue: 20 KARBIL/2015/62120 DAKSHINA KANNADA 05-11 OCTOBER 2026 Rs 10/-


‘ಕೆಟ್ಟದ್ದನ್ನು ದ್ವೇಷಿಸಿರಿ, ಒಳ್ಳೆಯದನ್ನು ಕೈಬಿಡದಿರಿ.’

## ಪೌರ ಕಾರ್ಮಿಕರ ಸೇವೆಗೆ ಗೌರವ: ಸಮವಸ್ತ್ರ ಧರಿಸಿ ಕಾರ್ಯಕ್ರಮದಲ್ಲಿ ಪಾಲ್ಗೊಂಡ ಸಿಎಂ ಡಿ.ಕೆ. ಶಿವಕುಮಾರ್



ಪೌರ ಕಾರ್ಮಿಕರ ದಿನಾಚರಣೆ ಅಂಗವಾಗಿ ಬೆಂಗಳೂರಿನ ಅರಮನೆ ಮೈದಾನದಲ್ಲಿ ‘ಸ್ವಚ್ಛತಾ ಯೋಧರಿಗೆ ನಲ್ಮೆಯ ನಮನ’ ಹೆಸರಿನಲ್ಲಿ ಬೃಹತ್ ಕಾರ್ಯಕ್ರಮ ಆಯೋಜಿಸಲಾಗಿತ್ತು. ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸನ್ಮಾನ್ಯ ಡಿ.ಕೆ. ಶಿವಕುಮಾರ್ ಅವರು ಪೌರ ಕಾರ್ಮಿಕರ ಸಮವಸ್ತ್ರ ಧರಿಸಿ ಪಾಲ್ಗೊಂಡು ಗಮನ ಸೆಳೆದರು. ಈ ವೇಳೆ ಪೌರ ಕಾರ್ಮಿಕರ ಸೇವೆಯನ್ನು ಗೌರವಿಸಿದ ಅವರು, ಹಲವಾರು ಪೌರ ಕಾರ್ಮಿಕರನ್ನು ಸನ್ಮಾನಿಸಿದರು. ಸ್ವಚ್ಛತಾ ಕಾರ್ಯದಲ್ಲಿ ತೊಡಗಿರುವ ಪೌರ ಕಾರ್ಮಿಕರ ಸೇವೆಗೆ ಗೌರವ ಸಲ್ಲಿಸುವ ಉದ್ದೇಶದಿಂದ ಕಾರ್ಯಕ್ರಮ ಆಯೋಜಿಸಲಾಗಿತ್ತು. ಸಚಿವರಾದ ಯತೀಂದ್ರ ಸಿದ್ದರಾಮಯ್ಯ, ಬಾಲಕೃಷ್ಣ ಬಸವಂತಪ್ಪ ಹಾಗೂ ಮುನಿಯಪ್ಪ ಅವರೂ ಪೌರ ಕಾರ್ಮಿಕರ ಸಮವಸ್ತ್ರ ಧರಿಸಿ ಕಾರ್ಯಕ್ರಮದಲ್ಲಿ ಭಾಗವಹಿಸಿದರು. ಜನಪ್ರತಿನಿಧಿಗಳು ಪೌರ ಕಾರ್ಮಿಕರ ಸಮವಸ್ತ್ರ ಧರಿಸಿ ಅವರೊಂದಿಗೆ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದು ಕಾರ್ಯಕ್ರಮದ ಪ್ರಮುಖ ಆಕರ್ಷಣೆಯಾಗಿತ್ತು.

## ಕರಾವಳಿಯಲ್ಲಿ ಹೈಕೋರ್ಟ್ ಪೀಠ - ಸಾಧ್ಯಾಸಾಧ್ಯತೆ ಪರಿಶೀಲನೆಗೆ 3 ಸದಸ್ಯರ ಸಮಿತಿ ರಚಿಸಿದ ಕರ್ನಾಟಕ ಹೈಕೋರ್ಟ್



ಮಂಗಳೂರು ಅಥವಾ ಉಡುಪಿಯಲ್ಲಿ ಕರ್ನಾಟಕ ಹೈಕೋರ್ಟ್‌ನ ಸರ್ಕ್ಯೂಟ್ ಅಥವಾ ಶಾಶ್ವತ ಪೀಠವನ್ನು ಸ್ಥಾಪಿಸುವ ಬಹುಕಾಲದ ಬೇಡಿಕೆಗೆ ಸಂಬಂಧಿಸಿದಂತೆ ಪ್ರಮುಖ ಸಾಂಸ್ಥಿಕ ಬೆಳವಣಿಗೆಯೊಂದು ನಡೆದಿದೆ. ಕರಾವಳಿ ಭಾಗದಲ್ಲಿ ಪೀಠ ಸ್ಥಾಪನೆಯ ಸಾಧ್ಯಾಸಾಧ್ಯತೆಗಳನ್ನು ಕೂಲಂಕಷವಾಗಿ ಪರಿಶೀಲಿಸಿ ವರದಿ ಸಲ್ಲಿಸಲು ಕರ್ನಾಟಕ ಹೈಕೋರ್ಟ್ ಮೂವರು ನ್ಯಾಯಮೂರ್ತಿಗಳನ್ನೊಳಗೊಂಡ ಉನ್ನತ ಮಟ್ಟದ ಸಮಿತಿಯನ್ನು ರಚಿಸಿದೆ. ಹೈಕೋರ್ಟ್‌ನ ರಿಜಿಸ್ಟ್ರಾರ್ ಜನರಲ್ ಅವರು ಈ ಕುರಿತು ಅಧಿಕೃತ ಅಧಿಸೂಚನೆ ಹೊರಡಿಸಿದ್ದು, ಸಂಬಂಧಪಟ್ಟ ಎಲ್ಲಾ ಹಿತಾಸಕ್ತಿದಾರರೊಂದಿಗೆ ಸಮಾಲೋಚನೆ ನಡೆಸಿ ವರದಿ ನೀಡುವಂತೆ ಸಮಿತಿಗೆ ಸೂಚಿಸಿದ್ದಾರೆ.

**ಸಮಿತಿಯ ರಚನೆ:** ಈ ಉನ್ನತ ಮಟ್ಟದ ಪರಿಶೀಲನಾ ಸಮಿತಿಯಲ್ಲಿ ಹೈಕೋರ್ಟ್‌ನ ಮೂವರು ಮಾನ್ಯ ನ್ಯಾಯಮೂರ್ತಿಗಳು ಸದಸ್ಯರಾಗಿದ್ದಾರೆ. ನ್ಯಾಯಮೂರ್ತಿ ಅನು ಶಿವರಾಮನ್, ನ್ಯಾಯಮೂರ್ತಿ ಎಸ್.ಜಿ. ಪಂಡಿತ್, ನ್ಯಾಯಮೂರ್ತಿ ಮೊಹಮ್ಮದ್ ನವಾಜ್. **ವ್ಯಾಪ್ತಿಗೆ ಒಳಪಡುವ ಜಿಲ್ಲೆಗಳು:** ಉದ್ದೇಶಿತ ಪೀಠದ ವ್ಯಾಪ್ತಿ ಹಾಗೂ ಪರಿಶೀಲನೆಯಲ್ಲಿ ಕರಾವಳಿ ಕರ್ನಾಟಕದ ಜೊತೆಗೆ ಸುತ್ತಮುತ್ತಲಿನ ಪ್ರಮುಖ ಜಿಲ್ಲೆಗಳನ್ನು ಸೇರಿಸಲಾಗಿದೆ. ದಕ್ಷಿಣ ಕನ್ನಡ (ಮಂಗಳೂರು), ಉಡುಪಿ, ಉತ್ತರ ಕನ್ನಡ, ಶಿವಮೊಗ್ಗ, ಚಿಕ್ಕಮಗಳೂರು, ಕೊಡಗು (ಮಡಿಕೇರಿ), ಹಾಸನ, ದಾವಣಗೆರೆ

**ಕಾನೂನು ಕ್ಷೇತ್ರ ಹಾಗೂ ಹೋರಾಟಗಾರರಿಂದ ಹೃತ್ಪೂರ್ವಕ ಸ್ವಾಗತ:** ಮಂಗಳೂರು/ಉಡುಪಿಯಲ್ಲಿ ಹೈಕೋರ್ಟ್ ಪೀಠ ಸ್ಥಾಪನೆಗಾಗಿ ವರ್ಷಗಳಿಂದ ಶ್ರಮಿಸುತ್ತಿರುವ ‘ಹೈಕೋರ್ಟ್ ಪೀಠ ಹೋರಾಟ ಸಮಿತಿ’ ಹಾಗೂ ಕಾನೂನು ಕ್ಷೇತ್ರದ ಗಣ್ಯರು ಈ ನಿರ್ಧಾರವನ್ನು ಮುಕ್ತಕಂಠದಿಂದ ಸ್ವಾಗತಿಸಿದ್ದಾರೆ.

* **ಐವನ್ ಡಿಸೋಜ (ವಿಧಾನ ಪರಿಷತ್ ಸದಸ್ಯ ಹಾಗೂ ಸಮಿತಿಯ ಸಂಚಾಲಕ):** "ಈ ಪ್ರಕ್ರಿಯೆಯು ಕರಾವಳಿ ಜನರ ಬಹುಕಾಲದ ಕನಸನ್ನು ನನಸು ಮಾಡುವ ದಿಕ್ಕಿನಲ್ಲಿ ಇಟ್ಟ ಮಹತ್ವದ ಹೆಜ್ಜೆಯಾಗಿದೆ. ಸಮಿತಿ ರಚನೆಯಿಂದ ಪ್ರಸ್ತಾವನೆಗೆ ಹೆಚ್ಚಿನ ಬಲ ಬಂದಿದೆ."
* **ಎಂ.ಪಿ. ನೊರೊನ್ಹಾ (ಮಂಗಳೂರು ಪ್ರಧಾನ ಜಿಲ್ಲಾ ಸರ್ಕಾರಿ ವಕೀಲ ಹಾಗೂ PRO):** "ಎಲ್ಲಾ ಹಿತಾಸಕ್ತಿದಾರರ ಅಭಿಪ್ರಾಯ ಸಂಗ್ರಹಿಸಿ, ಪ್ರಸ್ತಾವನೆಯನ್ನು ಸಾಂಸ್ಥಿಕ ಹಾಗೂ ವ್ಯವಸ್ಥಿತವಾಗಿ ಪರಿಶೀಲಿಸಲು ಈ ಸಮಿತಿ ಸಹಕಾರಿಯಾಗಲಿದೆ."
* **ಜಗದೀಶ್ ಶೆಣೈವಾ (ಮಂಗಳೂರು ವಕೀಲರ ಸಂಘದ ಅಧ್ಯಕ್ಷ):** "ಕರಾವಳಿ ಮತ್ತು ನೆರೆಯ ಜಿಲ್ಲೆಗಳ ಕಕ್ಷಿದಾರರು ಹಾಗೂ ವಕೀಲರು ಪ್ರಸ್ತುತ ಎದುರಿಸುತ್ತಿರುವ ಪ್ರಾಯೋಗಿಕ ಸವಾಲುಗಳಿಗೆ ಸಮಿತಿಯ ವಿಚಾರಣೆ ವೇಳೆ ಸೂಕ್ತ ಸ್ಪಂದನೆ ಸಿಗಲಿದೆ ಎಂಬ ಭರವಸೆ ಇದೆ."
* **ರಾಘವೇಂದ್ರ (ಮಂಗಳೂರು ವಕೀಲರ ಸಂಘದ ಮಾಜಿ ಅಧ್ಯಕ್ಷ):** "ಸಮಿತಿ ರಚನೆಯನ್ನು ಹಿರಿಯ ವಕೀಲರು ಹಾಗೂ ಕಾನೂನು ತಜ್ಞರು ಬೆಂಬಲಿಸಿದ್ದು, ಇದು ಅತ್ಯಂತ ಸ್ವಾಗತಾರ್ಹ ಬೆಳವಣಿಗೆ."
* **ರೆನಾಲ್ಡ್ ಪ್ರವೀಣ್ ಕುಮಾರ್ (ಉಡುಪಿ ವಕೀಲರ ಸಂಘದ ಅಧ್ಯಕ್ಷ):** "ಉಡುಪಿ ವಕೀಲರ ಸಂಘವು ಈ ಸಮಿತಿಯ ಕಾರ್ಯಕ್ಕೆ ಸಂಪೂರ್ಣ ಸಹಕಾರ ನೀಡಲಿದೆ. ಈ ನಿಟ್ಟಿನಲ್ಲಿ ಶ್ರಮಿಸಿದ ಎಲ್ಲರಿಗೂ ಧನ್ಯವಾದಗಳು."

**ಜನಸಾಮಾನ್ಯರಿಗೆ ಸಿಗುವ ಅನುಕೂಲಗಳು:** ಪ್ರಸ್ತುತ ಕರಾವಳಿ ಹಾಗೂ ಮಲೆನಾಡು ಭಾಗದ ಜನರು ತಮ್ಮ ಹೈಕೋರ್ಟ್ ಸಂಬಂಧಿ ಪ್ರಕರಣಗಳ ವಿಚಾರಣೆಗಾಗಿ ಬೆಂಗಳೂರಿನ ಪ್ರಧಾನ ಪೀಠಕ್ಕೆ ಪ್ರಯಾಣಿಸಬೇಕಾಗಿದೆ. ಮಂಗಳೂರು ಅಥವಾ ಉಡುಪಿಯಲ್ಲಿ ಸರ್ಕ್ಯೂಟ್/ಶಾಶ್ವತ ಪೀಠ ಸ್ಥಾಪನೆಯಾದರೆ, ಕಕ್ಷಿದಾರರಿಗೆ ಬೆಂಗಳೂರಿಗೆ ಅಲೆಯುವ ಆರ್ಥಿಕ ಹೊರೆ ಮತ್ತು ಸಮಯ ವ್ಯಯ ತಪ್ಪಲಿದೆ. ಸುಲಭ ಹಾಗೂ ಶೀಘ್ರ ನ್ಯಾಯದೊರಕಿಸುವಿಕೆ (Access to Justice) ಸಾಧ್ಯವಾಗಲಿದೆ. ಸ್ಥಳೀಯ ವಕೀಲರಿಗೆ ಹಾಗೂ ಕಕ್ಷಿದಾರರಿಗೆ ನ್ಯಾಯಾಂಗ ಪ್ರಕ್ರಿಯೆಗಳು ಅತ್ಯಂತ ಸಮೀಪದಲ್ಲಿ ಲಭ್ಯವಾಗಲಿವೆ.

## ಅಪ್ರಾಪ್ತರ ಸೋಷಿಯಲ್ ಮೀಡಿಯಾ ಖಾತೆಗೆ ಕಡಿವಾಣ

### 18 ವರ್ಷ ವಯೋಮಿತಿ ಕುರಿತು ನಿಯಮ ರೂಪಿಸಲು ಕೇಂದ್ರಕ್ಕೆ ಸುಪ್ರೀಂ ಸೂಚನೆ



ಅಪ್ರಾಪ್ತ ವಯಸ್ಕರು ಸ್ವತಂತ್ರವಾಗಿ ಸೋಷಿಯಲ್ ಮೀಡಿಯಾ ಖಾತೆ ತೆರೆಯುವುದನ್ನು ನಿಯಂತ್ರಿಸಲು ಸೂಕ್ತ ಕಾನೂನು ಅಥವಾ ನಿಯಮಾವಳಿ ರೂಪಿಸುವಂತೆ ಸುಪ್ರೀಂ ಕೋರ್ಟ್ ಕೇಂದ್ರ ಸರ್ಕಾರಕ್ಕೆ ಸೂಚಿಸಿದೆ. ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ನೇತೃತ್ವದ ತ್ರಿಸದಸ್ಯ ಪೀಠವು ಜಸ್ಟ್ ರೈಟ್ಸ್ ಫಾರ್ ಚಿಲ್ಡ್ರನ್ ಅಲಾಯನ್ಸ್ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿತು. ಸೋಷಿಯಲ್ ಮೀಡಿಯಾ ವೇದಿಕೆಗಳಲ್ಲಿ ಅಪ್ರಾಪ್ತರು ಖಾತೆ ತೆರೆಯಲು ಅವಕಾಶವಿರುವುದರ ಕುರಿತು ನ್ಯಾಯಪೀಠ ಕಳವಳ ವ್ಯಕ್ತಪಡಿಸಿದ್ದು, 18 ವರ್ಷವನ್ನು ಕನಿಷ್ಠ ವಯೋಮಿತಿಯಾಗಿ ಪರಿಗಣಿಸುವ ಹಾಗೂ ಭಾರತೀಯ ಕಾನೂನುಗಳಿಗೆ ಅನುಗುಣವಾಗಿ ವೇದಿಕೆಗಳ ನಿಯಮಗಳನ್ನು ರೂಪಿಸುವ ಅಗತ್ಯವನ್ನು ಸೂಚಿಸಿದೆ. ಅಪ್ರಾಪ್ತರಿಗೆ ಆನ್‌ಲೈನ್ ಗ್ರೂಮಿಂಗ್, ಸೈಬರ್‌ಬುಲ್ಲಿಯಿಂಗ್, ಲೈಂಗಿಕ ಶೋಷಣೆ, ವಯೋಸೂಕ್ತವಲ್ಲದ ವಿಷಯಗಳಿಗೆ ಒಡ್ಡಿಕೊಳ್ಳುವಿಕೆ ಹಾಗೂ ವೈಯಕ್ತಿಕ ಮಾಹಿತಿಯ ದುರ್ಬಳಕೆಯಂತಹ ಅಪಾಯಗಳಿವೆ ಎಂದು ಅರ್ಜಿಯಲ್ಲಿ ಉಲ್ಲೇಖಿಸಲಾಗಿದೆ. ಅರ್ಜಿದಾರರ ಪರ ಹಿರಿಯ ವಕೀಲ ಎಚ್.ಎಸ್. ಫೂಲ್ಕಾ ವಾದ ಮಂಡಿಸಿದ್ದರು. ಮಕ್ಕಳ ಡಿಜಿಟಲ್ ಸುರಕ್ಷತೆಯನ್ನು ಖಚಿತಪಡಿಸಲು ಕೇಂದ್ರ ಸರ್ಕಾರವು ಸಾಮಾಜಿಕ ಜಾಲತಾಣ ವೇದಿಕೆಗಳಿಗೆ ಸೂಕ್ತ ನಿಯಮಗಳನ್ನು ಜಾರಿಗೊಳಿಸುವ ಕುರಿತು ಪರಿಶೀಲಿಸುವುದಾಗಿ ತಿಳಿಸಿದೆ. ಪ್ರಕರಣದ ವಿಚಾರಣೆಯನ್ನು ಮುಂದುವರಿಸಲಾಗಿದ್ದು, ಅಪ್ರಾಪ್ತರಿಗೆ ಪಾಲಕರ ಒಪ್ಪಿಗೆಯ ವ್ಯವಸ್ಥೆಯನ್ನೂ ಪರಿಗಣಿಸುವಂತೆ ನ್ಯಾಯಾಲಯ ಸೂಚಿಸಿರುವುದಾಗಿ ವರದಿಯಾಗಿದೆ.

## ಕ್ಯಾಬಿನೆಟ್ ನಿರ್ಣಯಗಳ ತ್ವರಿತ ಅನುಷ್ಠಾನಕ್ಕೆ ನೋಡಲ್ ಅಧಿಕಾರಿಗಳ ನೇಮಕ - ಯು.ಟಿ. ಖಾದರ್



ಸೆಪ್ಟೆಂಬರ್ 18ರಂದು ಮಂಗಳೂರಿನಲ್ಲಿ ನಡೆದ ರಾಜ್ಯ ಸಚಿವ ಸಂಪುಟ ಸಭೆಯಲ್ಲಿ ಕೈಗೊಂಡ ನಿರ್ಣಯಗಳನ್ನು ತ್ವರಿತವಾಗಿ ಅನುಷ್ಠಾನಗೊಳಿಸಲು ಸಂಬಂಧಿಸಿದ ಇಲಾಖೆಗಳು ನೋಡಲ್ ಅಧಿಕಾರಿಗಳನ್ನು ನೇಮಿಸುವಂತೆ ದಕ್ಷಿಣ ಕನ್ನಡ ಜಿಲ್ಲಾ ಉಸ್ತುವಾರಿ ಸಚಿವರಾದ ಯು.ಟಿ. ಖಾದರ್ ಅವರು ಸೂಚಿಸಿದರು. ಜಿಲ್ಲಾಧಿಕಾರಿ ಕಚೇರಿಯಲ್ಲಿ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಅವರು, ಸಚಿವ ಸಂಪುಟದ ನಿರ್ಧಾರಗಳು ಸರ್ಕಾರದ ಆದೇಶವಾಗಿ ಹೊರಬರುವವರೆಗೆ ಸಂಬಂಧಿಸಿದ ಇಲಾಖೆಗಳು ಸಚಿವಾಲಯದೊಂದಿಗೆ ನಿರಂತರ ಸಮನ್ವಯ ಸಾಧಿಸಬೇಕು. ಸರ್ಕಾರದ ಆದೇಶ ಹೊರಬಂದ ಕೂಡಲೇ ಕ್ರಿಯಾಯೋಜನೆ ರೂಪಿಸಿ ಟೆಂಡರ್ ಪ್ರಕ್ರಿಯೆ ಆರಂಭಿಸುವಂತೆ ಸೂಚಿಸಿದರು.

ಕುದ್ರು ದ್ವೀಪಗಳ ಅಭಿವೃದ್ಧಿಯನ್ನು ಪಿಪಿಪಿ ಮಾದರಿಯಲ್ಲಿ ಕೈಗೊಳ್ಳಲಿದ್ದು, ಸಿಆರ್‌ಝೆಡ್ ಅನುಮೋದನೆ ಪಡೆದು ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸುವಂತೆ ತಿಳಿಸಿದರು. ಮರವೂರು ಹೊಸ ಸೇತುವೆ ಹಾಗೂ ಎಕ್ಕೂರಿನಲ್ಲಿ ಅತ್ಯಾಧುನಿಕ ಮೀನು ಮಾರುಕಟ್ಟೆ ನಿರ್ಮಾಣ ಸೇರಿದಂತೆ ವಿವಿಧ ಮೂಲಸೌಕರ್ಯ ಯೋಜನೆಗಳಿಗೆ ಡಿಪಿಆರ್ ಸಿದ್ಧಪಡಿಸುವಂತೆ ಲೋಕೋಪಯೋಗಿ ಇಲಾಖೆಗೆ ಸೂಚಿಸಿದರು. ಬಾಳೆಪುಣಿಯಲ್ಲಿ ನಿರ್ಮಾಣವಾಗುತ್ತಿರುವ ಜೈಲು ಕಾಂಪೌಂಡ್ ಕಾಮಗಾರಿಯನ್ನು ತ್ವರಿತವಾಗಿ ಪೂರ್ಣಗೊಳಿಸುವುದು, ಮಂಗಳ ಕ್ರೀಡಾಂಗಣವನ್ನು ಅತ್ಯಾಧುನಿಕವಾಗಿ ಅಭಿವೃದ್ಧಿಪಡಿಸುವುದು, ಉಳ್ಳಾಲ ಕೋಟೆಪುರ ಹೊಸ ಸೇತುವೆ ಹಾಗೂ ಹೊಸ ಜೆಟ್ಟಿ ನಿರ್ಮಾಣ ಕಾಮಗಾರಿಗಳನ್ನು ಸಮನ್ವಯದಿಂದ ನಿರ್ವಹಿಸುವಂತೆಯೂ ಸಚಿವರು ಸೂಚಿಸಿದರು. ಶೀಘ್ರದಲ್ಲೇ ಮುಖ್ಯಮಂತ್ರಿ ಯೋಜನೆಗಳ ಪ್ರಗತಿ ಪರಿಶೀಲನೆಗೆ ಆಗಮಿಸಲಿರುವ ಹಿನ್ನೆಲೆಯಲ್ಲಿ ಅಧಿಕಾರಿಗಳು ಯೋಜನೆಗಳ ಕುರಿತು ಸ್ಪಷ್ಟ ಮಾಹಿತಿಯೊಂದಿಗೆ ಸಿದ್ಧರಾಗಿರಬೇಕು ಎಂದು ಯು.ಟಿ. ಖಾದರ್ ಅವರು ತಿಳಿಸಿದರು.

ಸಭೆಯಲ್ಲಿ ಜಿಲ್ಲಾಧಿಕಾರಿಯವರಾದ ದರ್ಶನ್ ಹೆಚ್.ವಿ., ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ನರ್ವಡೆ ವಿನಾಯಕ ಕಾರ್ಬಾರಿ, ಪೊಲೀಸ್ ಆಯುಕ್ತರಾದ ಸುಧೀರ್ ಕುಮಾರ್ ರೆಡ್ಡಿ, ಮಹಾನಗರಪಾಲಿಕೆ ಆಯುಕ್ತ ರಾಹುಲ್ ರತ್ನಂ ಪಾಂಡೆ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

## ಮಂಗಳೂರಿನ ಪಾಂಡೇಶ್ವರದಲ್ಲಿ ಕಟ್ಟಡದ ಬಾಲ್ಕನಿಯ ತಡೆಗೋಡೆ ಕುಸಿತ - ಓರ್ವ ವಿದ್ಯಾರ್ಥಿ ಸಾವು; 3 ಮಂದಿಗೆ ಗಾಯ

## ಶಿಥಿಲ ಕಟ್ಟಡದಲ್ಲಿ ಕಾರ್ಯಕ್ರಮ ಆಯೋಜನೆ ಆರೋಪ - ಮಾಲೀಕರ ಹಾಗೂ ಆಯೋಜಕರ ವಿರುದ್ಧ FIR



ಮಂಗಳೂರು ನಗರದ ಪಾಂಡೇಶ್ವರದ ಎಮ್ಮೆಕೆರೆಯಲ್ಲಿರುವ ‘ರಮಾ ಲಕ್ಷ್ಮೀ ನಾರಾಯಣ ಹಾಲ್’ನಲ್ಲಿ ವಿದ್ಯಾರ್ಥಿಗಳ ಕಾರ್ಯಕ್ರಮದ ವೇಳೆ ಮೊದಲ ಮಹಡಿಯ ಬಾಲ್ಕನಿಯ ತಡೆಗೋಡೆ ಏಕಾಏಕಿ ಕುಸಿದು 16 ವರ್ಷದ ವಿದ್ಯಾರ್ಥಿಯೊಬ್ಬ ಮೃತಪಟ್ಟಿದ್ದು, ಮೂವರು ಗಾಯಗೊಂಡಿರುವ ಘಟನೆ ನಡೆದಿದೆ.

ಸೆಪ್ಟೆಂಬರ್ 26ರಂದು ಶನಿವಾರ ಮಧ್ಯಾಹ್ನ ವಿದ್ಯಾರ್ಥಿಗಳ ಕಾರ್ಯಕ್ರಮದ ಅಂಗವಾಗಿ ರ್‍ಯಾಲಿ ನಡೆಯುತ್ತಿದ್ದ ಸಂದರ್ಭದಲ್ಲಿ ಈ ದುರಂತ ಸಂಭವಿಸಿದೆ ಎಂದು ಮಂಗಳೂರು ದಕ್ಷಿಣ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ FIRನಲ್ಲಿ ಉಲ್ಲೇಖಿಸಲಾಗಿದೆ. ಕಟ್ಟಡದ ಕೆಳಭಾಗದಲ್ಲಿ ನಿಂತು ರ್‍ಯಾಲಿಯನ್ನು ವೀಕ್ಷಿಸುತ್ತಿದ್ದ ಸೈಂಟ್ ಅಲೋಶಿಯಸ್ ಪಿಯು ಕಾಲೇಜಿನ ವಾಣಿಜ್ಯ ವಿಭಾಗದ ವಿದ್ಯಾರ್ಥಿ 16 ವರ್ಷ ಪ್ರಾಯದ ಮೊಹಿದೀನ್ ಶಮ್ಮಾಸ್ ಅವರ ಮೇಲೆ ಮೊದಲ ಮಹಡಿಯ ತಡೆಗೋಡೆಯ ದೊಡ್ಡ ಭಾಗ ಕುಸಿದು ಬಿದ್ದ ಪರಿಣಾಮ ಗಂಭೀರವಾಗಿ ಗಾಯಗೊಂಡಿದ್ದರು.

ತಲೆಗೆ ತೀವ್ರ ಗಾಯಗೊಂಡಿದ್ದ ಶಮ್ಮಾಸ್ ಅವರನ್ನು ತಕ್ಷಣ ಆಸ್ಪತ್ರೆಗೆ ದಾಖಲಿಸಿ ಐಸಿಯುನಲ್ಲಿ ಚಿಕಿತ್ಸೆ ನೀಡಲಾಗಿತ್ತು. ಆದರೆ ಚಿಕಿತ್ಸೆ ಫಲಕಾರಿಯಾಗದೆ ಸೆಪ್ಟೆಂಬರ್ 26ರ ರಾತ್ರಿ ಸುಮಾರು 11.33ಕ್ಕೆ ಮೃತಪಟ್ಟಿದ್ದಾರೆ ಎಂದು ಆಸ್ಪತ್ರೆಯ ಮರಣ ಸೂಚನಾ ಪತ್ರದಲ್ಲಿ ದಾಖಲಾಗಿದೆ.

ಮೂವರು ವಿದ್ಯಾರ್ಥಿಗಳಿಗೂ ಗಾಯ: ತಡೆಗೋಡೆ ಕುಸಿದ ಪರಿಣಾಮ ಮೊಹಮ್ಮದ್ ಸನಾನ್ ಅಹ್ಮದ್, ಮೊಹಮ್ಮದ್ ಹನೀಫ್ ಹಾಗೂ ದಾವೂದು ಎಂಬ ಮೂವರು ವಿದ್ಯಾರ್ಥಿಗಳಿಗೂ ಗಾಯಗಳಾಗಿದ್ದು, ಅವರನ್ನು ಕೂಡ ಆಸ್ಪತ್ರೆಗೆ ಕರೆದೊಯ್ದು ಚಿಕಿತ್ಸೆ ನೀಡಲಾಗಿದೆ ಎಂದು FIRನಲ್ಲಿ ತಿಳಿಸಲಾಗಿದೆ.

ಶಿಥಿಲ ಕಟ್ಟಡದಲ್ಲೇ ಕಾರ್ಯಕ್ರಮ ಆಯೋಜಿಸಿದ ಆರೋಪ: ಮೃತ ವಿದ್ಯಾರ್ಥಿಯ ತಂದೆ ಮೊಹಮ್ಮದ್ ಇಲಿಯಾಸ್ ಮೊಹಿದಿನಬ್ಬ ನೀಡಿರುವ ದೂರಿನ ಆಧಾರದಲ್ಲಿ ಪ್ರಕರಣ ದಾಖಲಾಗಿದೆ. ದೂರಿನಲ್ಲಿ, ‘ರಮಾ ಲಕ್ಷ್ಮೀ ನಾರಾಯಣ ಹಾಲ್’ ಕಟ್ಟಡವು ಶಿಥಿಲಾವಸ್ಥೆಯಲ್ಲಿದ್ದು, ಯಾವುದೇ ಸಂದರ್ಭದಲ್ಲಿ ಕುಸಿಯುವ ಸಾಧ್ಯತೆ ತಿಳಿದಿದ್ದರೂ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಭಾಗವಹಿಸುವ ಕಾರ್ಯಕ್ರಮಕ್ಕೆ ಸೂಕ್ತ ಮುಂಜಾಗ್ರತಾ ಕ್ರಮ ಕೈಗೊಳ್ಳಲಾಗಿಲ್ಲ ಎಂದು ಆರೋಪಿಸಲಾಗಿದೆ.

ಕಟ್ಟಡದ ಮಾಲೀಕ ಪರೀಕ್ಷಿತ್ ರೈ ಹಾಗೂ ಕಾರ್ಯಕ್ರಮ ಆಯೋಜಕರಾದ ದಿನಕರ್ ಶೆಟ್ಟಿ ಅವರು ಕಟ್ಟಡದ ಸ್ಥಿತಿಯ ಬಗ್ಗೆ ತಿಳಿದಿದ್ದರೂ ವಿದ್ಯಾರ್ಥಿಗಳಿಗೆ ಅಗತ್ಯ ಮುನ್ನೆಚ್ಚರಿಕೆ ನೀಡದೆ ಕಾರ್ಯಕ್ರಮ ನಡೆಸಿದ ಕಾರಣ ಈ ದುರಂತ ಸಂಭವಿಸಿದೆ ಎಂದು ದೂರಿನಲ್ಲಿ ಆರೋಪಿಸಲಾಗಿದೆ.

ಈ ಸಂಬಂಧ ಮಂಗಳೂರು ದಕ್ಷಿಣ ಪೊಲೀಸ್ ಠಾಣೆಯಲ್ಲಿ ಕ್ರೈಂ ನಂ.197/2026ರಂತೆ ಪ್ರಕರಣ ದಾಖಲಾಗಿದ್ದು, ಘಟನೆ ಕುರಿತು ಪೊಲೀಸರು ತನಿಖೆ ಮುಂದುವರಿಸಿದ್ದಾರೆ. FIRನಲ್ಲಿ ಆರೋಪಗಳು ದಾಖಲಾಗಿರುವುದಷ್ಟೇ ಆಗಿದ್ದು, ಪ್ರಕರಣದ ಸತ್ಯಾಸತ್ಯತೆ ತನಿಖೆಯಿಂದ ತಿಳಿದುಬರಬೇಕಿದೆ.

## ಅಬ್ದುಲ್ ರಹಿಮಾನ್ ಕೊಲೆ ಪ್ರಕರಣದ 6 ಆರೋಪಿಗಳಿಗೆ ‘ಗೂಂಡಾ ಕಾಯ್ದೆ’

### ಕೊಲೆ, ಕೊಲೆ ಯತ್ನ ಸೇರಿದಂತೆ ಹಲವು ಪ್ರಕರಣಗಳ ಹಿನ್ನೆಲೆಯಲ್ಲಿ KCOCA ಬಳಿಕವೂ ಪೊಲೀಸರ ಕ್ರಮ





ಬಂಟ್ವಾಳ: ಕೊಳತ್ತಮಜಲು ಅಬ್ದುಲ್ ರಹಿಮಾನ್ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿಗಳ ವಿರುದ್ಧ ದಕ್ಷಿಣ ಕನ್ನಡ ಜಿಲ್ಲಾ ಪೊಲೀಸರು ಕಾನೂನು ಕ್ರಮವನ್ನು ಮತ್ತಷ್ಟು ಬಿಗಿಗೊಳಿಸಿದ್ದಾರೆ. ಈಗಾಗಲೇ KCOCA ಅಡಿಯಲ್ಲಿ ಕ್ರಮ ಕೈಗೊಂಡಿದ್ದ ಪ್ರಕರಣದ ಪ್ರಮುಖ ಆರು ಆರೋಪಿಗಳ ವಿರುದ್ಧ ಇದೀಗ ಗೂಂಡಾ ಕಾಯ್ದೆಯಡಿ ಪ್ರತ್ಯೇಕ ಕ್ರಮ ಜರುಗಿಸಲಾಗಿದೆ.

38 ವರ್ಷ ಪ್ರಾಯದ ಭರತ್ ಕುಮ್ಡೇಲು, 33 ವರ್ಷ ಪ್ರಾಯದ ಶಿವಪ್ರಸಾದ್, 34 ವರ್ಷ ಪ್ರಾಯದ ಪ್ರದೀಪ್, 32 ವರ್ಷ ಪ್ರಾಯದ ಅಭಿನ್ ರೈ, 24 ವರ್ಷ ಪ್ರಾಯದ ತೇಜಾಕ್ಷ ಹಾಗೂ 35 ವರ್ಷ ಪ್ರಾಯದ ರಂಜಿತ್ ಅಲಿಯಾಸ್ ರಂಜು ವಿರುದ್ಧ ಸೆಪ್ಟೆಂಬರ್ 19ರಂದು ಗೂಂಡಾ ಕಾಯ್ದೆಯಡಿ ಕ್ರಮ ಕೈಗೊಳ್ಳಲಾಗಿದೆ ಎಂದು ದಕ್ಷಿಣ ಕನ್ನಡ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯವರಾದ ಡಾ. ಅರುಣ್ ಕೆ. ಅವರು ತಿಳಿಸಿದ್ದಾರೆ.

**ಗೂಂಡಾ ಕಾಯ್ದೆ ಜಾರಿಗೆ ಪ್ರಮುಖ ಕಾರಣವೇನು?**

ಪೊಲೀಸ್ ದಾಖಲೆಗಳ ಪ್ರಕಾರ, ಈ ಆರು ಮಂದಿಯ ಪೈಕಿ ಹಲವರ ವಿರುದ್ಧ ಕೊಲೆ, ಕೊಲೆ ಯತ್ನ, ಸಾರ್ವಜನಿಕ ಆಸ್ತಿಗೆ ಹಾನಿ, ಶಸ್ತ್ರಾಸ್ತ್ರ ಕಾಯ್ದೆ, NDPS ಕಾಯ್ದೆ ಹಾಗೂ ಸಂಘಟಿತ ಅಪರಾಧಕ್ಕೆ ಸಂಬಂಧಿಸಿದ ಹಲವು ಪ್ರಕರಣಗಳು ವಿವಿಧ ಪೊಲೀಸ್ ಠಾಣೆಗಳಲ್ಲಿ ದಾಖಲಾಗಿವೆ.

ಪುನರಾವರ್ತಿತವಾಗಿ ಗಂಭೀರ ಅಪರಾಧ ಪ್ರಕರಣಗಳಲ್ಲಿ ಹೆಸರು ಕಾಣಿಸಿಕೊಂಡಿರುವ ಹಿನ್ನೆಲೆಯಲ್ಲಿ ಸಾರ್ವಜನಿಕ ಶಾಂತಿ ಮತ್ತು ಕಾನೂನು ಸುವ್ಯವಸ್ಥೆ ಕಾಪಾಡುವ ಉದ್ದೇಶದಿಂದ ಗೂಂಡಾ ಕಾಯ್ದೆಯಡಿ ಕ್ರಮ ಕೈಗೊಳ್ಳಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಭರತ್ ಕುಮ್ಡೇಲು ವಿರುದ್ಧ ಬಂಟ್ವಾಳ ನಗರ, ಬಂಟ್ವಾಳ ಗ್ರಾಮಾಂತರ, ಉಪ್ಪಿನಂಗಡಿ ಹಾಗೂ ಪುತ್ತೂರು ನಗರ ಠಾಣೆಗಳಲ್ಲಿ ವಿವಿಧ ಗಂಭೀರ ಪ್ರಕರಣಗಳು ದಾಖಲಾಗಿರುವುದಾಗಿ ತಿಳಿಸಲಾಗಿದೆ. ತೇಜಾಕ್ಷ ವಿರುದ್ಧ NDPS ಕಾಯ್ದೆ, ಸಾರ್ವಜನಿಕ ಆಸ್ತಿಗೆ ಹಾನಿ, ಕೊಲೆ ಹಾಗೂ ಕೊಲೆ ಯತ್ನಕ್ಕೆ ಸಂಬಂಧಿಸಿದ ಪ್ರಕರಣಗಳ ಉಲ್ಲೇಖವಿದೆ.

ಅದೇ ರೀತಿ ಪ್ರದೀಪ್ ವಿರುದ್ಧ ಕೊಲೆ, ಕೊಲೆ ಯತ್ನ ಹಾಗೂ KCOCಗೆ ಸಂಬಂಧಿಸಿದ ಪ್ರಕರಣಗಳು, ರಂಜಿತ್ ವಿರುದ್ಧ ಕೊಲೆ ಹಾಗೂ KCOCA ಸಂಬಂಧಿತ ಪ್ರಕರಣಗಳು ದಾಖಲಾಗಿವೆ. ಅಭಿನ್ ರೈ ಮತ್ತು ಶಿವಪ್ರಸಾದ್ ವಿರುದ್ಧವೂ ಕೊಲೆ ಹಾಗೂ ಸಂಘಟಿತ ಅಪರಾಧಕ್ಕೆ ಸಂಬಂಧಿಸಿದ ಪ್ರಕರಣಗಳಿರುವುದಾಗಿ ಪೊಲೀಸ್ ದಾಖಲೆಗಳನ್ನು ಆಧರಿಸಿದ ವಿವರಗಳಲ್ಲಿ ತಿಳಿಸಲಾಗಿದೆ.

**KCOCA ಬಳಿಕ ಗೂಂಡಾ ಕಾಯ್ದೆ ಏಕೆ?**

ಅಬ್ದುಲ್ ರಹಿಮಾನ್ ಕೊಲೆ ಪ್ರಕರಣದ ತನಿಖೆಯ ಸಂದರ್ಭದಲ್ಲಿ ಆರೋಪಿಗಳ ವಿರುದ್ಧ ಈಗಾಗಲೇ KCOCA ಅಡಿಯಲ್ಲಿ ಕ್ರಮ ಕೈಗೊಳ್ಳಲಾಗಿತ್ತು.

ಬಳಿಕ ಜಾಮೀನು ಪಡೆದವರ ಪೈಕಿ ಆರು ಮಂದಿಯ ವಿರುದ್ಧ ದಾಖಲಾಗಿರುವ ಇತರ ಗಂಭೀರ ಪ್ರಕರಣಗಳು ಮತ್ತು ಸಾರ್ವಜನಿಕ ಸುವ್ಯವಸ್ಥೆಗೆ ಸಂಬಂಧಿಸಿದ ಪೊಲೀಸ್ ಮೌಲ್ಯಮಾಪನದ ಹಿನ್ನೆಲೆಯಲ್ಲಿ ಗೂಂಡಾ ಕಾಯ್ದೆಯಡಿ ಪ್ರತ್ಯೇಕ ಕ್ರಮ ಕೈಗೊಳ್ಳಲಾಗಿದೆ ಎಂದು ವರದಿಯಾಗಿದೆ.

ಪೊಲೀಸರ ಪ್ರಕಾರ, ಸಂಘಟಿತ ಹಾಗೂ ಪುನರಾವರ್ತಿತ ಅಪರಾಧ ಚಟುವಟಿಕೆಗಳನ್ನು ನಿಯಂತ್ರಿಸುವುದು ಮತ್ತು ಸಾರ್ವಜನಿಕ ಶಾಂತಿ–ಸುವ್ಯವಸ್ಥೆ ಕಾಪಾಡುವುದು ಈ ಕ್ರಮದ ಉದ್ದೇಶವಾಗಿದೆ. ಆದಾಗ್ಯೂ, ಆರೋಪಿಗಳ ವಿರುದ್ಧ ದಾಖಲಾಗಿರುವ ಪ್ರಕರಣಗಳು ನ್ಯಾಯಾಲಯದಲ್ಲಿ ಅಂತಿಮವಾಗಿ ಸಾಬೀತಾಗುವವರೆಗೆ ಅವರು ಕಾನೂನುಬದ್ಧವಾಗಿ ಆರೋಪಿಗಳಾಗಿಯೇ ಪರಿಗಣಿಸಲ್ಪಡುತ್ತಾರೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

## Saint Joseph's University Hosts Distinguished Lecture on Responsible AI

Saint Joseph's University, Bengaluru, hosted a distinguished lecture on "Responsible AI for a Sustainable Future: Opportunities, Challenges and Societal Impact". The lecture was delivered by Prof. Saman Halgamuge of the University of Melbourne, Australia, offering students and faculty valuable insights into the evolving field of Artificial Intelligence and its wider impact on society. Prior to the lecture, Prof. Halgamuge interacted with the faculty members of Saint Joseph's University. The session provided an opportunity for faculty members to exchange ideas and engage in discussions on Artificial Intelligence, emerging technologies, research opportunities and potential academic collaborations.The programme commenced with a prayer song rendered by Prajwal, an MCA student, followed by the ceremonial lighting of the lamp. The dignitaries, resource person, faculty members and students were then warmly welcomed to the programme. Dr Deepa Nagalavi, IEEE Computer Society Faculty Advisor, Saint Joseph's University, formally introduced Prof. Halgamuge, highlighting his academic background, professional achievements, research contributions and expertise. The



f the programme.In his lecture, Prof. Halgamuge highlighted the growing significance of Responsible Artificial Intelligence in an increasingly technology-driven world. He discussed the opportunities offered by AI while also addressing the challenges and societal implications associated with its rapid development. He emphasised the importance of ensuring that AI technologies are developed and applied responsibly, ethically and in ways that contribute to a sustainable future. The lecture was followed by an engaging interactive Question-and-Answer session, during which students and faculty members interacted with Prof. Halgamuge and sought clarification on various aspects of AI, research and emerging technologies. The programme also featured the distribution of badges to the newly appointed office-bearers of the IEEE Computer Society Student Branch, formally recognising their respective roles and responsibilities. Badges were also distributed to the PR interns, acknowledging their contribution to IEEE Computer Society activities and related initiatives at the University.The programme concluded with a Vote of Thanks by Amritha, Chair of the IEEE Computer Society. She expressed gratitude to Prof. Saman Halgamuge for sharing his valuable knowledge and insights and thanked the University leadership, IEEE Computer Society, Office for International Affairs, School of Information Technology, faculty members, organising team, students and all others who contributed to the successful conduct of the event. The distinguished lecture served as a valuable academic platform for exploring the responsible development and application of Artificial Intelligence, with particular emphasis on sustainability and its impact on society. The programme encouraged students and faculty members to look beyond the technological capabilities of AI and reflect on its ethical, social and environmental implications.

**IN THE COURT OF THE PRL SENIOR CIVIL JUDGE & J.M.F.C. AT BANTWAL**

Crl. M.C. No. 201 / 2026

In the matter of obtaining the death certificate of Late Anjeline Lobo @ Alice Lobo, W/o Late David Padivala @ David Lobo and was last residing at Mangaje House, Kavalapaduru village, Bantwal Taluk.

Between:

**SMT. MARSELINA FERNANDIES and others** ...*Petitioners*

And

**The Tahashildar / Registrar of Births and Deaths** ...*Respondent*

**NOTICE**

Take notice that the petitioners have filed the above petition before this court seeking direction to the respondent to make the entry of the date of death of the above said Anjeline Lobo @ Alice Lobo, who expired on 28-10-2010 at Mangaje House, Kavalapaduru village, Bantwal Taluk. The above petition stand posted to 6-11-2026. Persons desiring to oppose the same may appear before this court on that date at 11 A.M. either in person or through an advocate, failing which the petition will be decided as exparte.

Given under my hand and the seal of the court on this the 9th day of September, 2026.

*By Order of the Court*

Sd/- ***Chief Ministerial Officer***

Court of Prl. Sr. Civil Judge & J.M.F.C. Bantwal.

Sd/- **H. Sathish Rao**

*Advocate for the Petitioners*

## Father Muller Celebrates `World Pharmacist Day', Honouring the Dedicated Service of Pharmacists





Father Muller Medical College Hospital Celebrated World Pharmacist Day with enthusiasm and gratitude, recognising the dedicated services of pharmacists and allied pharmacy personnel who work tirelessly round the clock to ensure the safe and timely dispensing of medicines to patients and various departments of the hospital. The celebration, held in the early hours of the day, brought together the pharmacy team to acknowledge their commitment, professionalism and indispensable contribution to patient care. The programme was presided over by Rev. Fr Faustine Lucas Lobo, Director, Father Muller Charitable Institutions, whose constant encouragement and support have been instrumental in the growth and development of the Pharmacy Department. The programme commenced with a welcome address by Sr Mary Zeenath Suares, IC, Pharmacy, who set the tone for the celebration by highlighting the theme "Empowering Pharmacists for Healthier Futures." Quoting the words, "My words are antibiotics, my smile is analgesic, my touch is anti-inflammatory, my presence is antiseptic, my feeling is antipyretic. That's why I am a pharmacist," she reflected on the compassion, responsibility and human connection that form an integral part of the pharmacist's profession. Addressing the gathering, Rev. Fr Faustine Lucas Lobo appreciated the dedication of the pharmacy team and acknowledged the serious responsibility entrusted to pharmacists as the final point of contact between the healthcare system and the patient. Referring to the quotation shared during the welcome address, he suggested that it be framed and displayed prominently in the Pharmacy so that it would continually remind every pharmacist of the meaning and responsibility attached to their profession. The Director observed that the anxiety and expectations of patients and their families are often clearly visible in the waiting area. Patients arrive with the hope of seeing their loved ones recover and return home, and the pharmacist, being among the final healthcare professionals they encounter, has an important role to play in offering reassurance, empathy and hope.He emphasised that while dispensing medicines is a professional responsibility, the manner in which pharmacists interact with patients is equally significant. "The consumer is king, and the responsibility for what is given to the consumer rests with the dispenser," he noted, underscoring the importance of accuracy, accountability and compassion in pharmaceutical services. A cake-cutting ceremony formed part of the celebration, adding a spirit of fellowship and joy to the occasion. The services and long-standing commitment of members of the Pharmacy Department were also recognised. Safia Thalachery, Junior Pharmacist, with 8 years and 6 months of service; Chaithra, Junior Pharmacist, with 7 years; Veena Lobo, Senior Clerk, with 29 years and 3 months; Mamatha, Senior Pharmacy Assistant, with 18 years; Janaki, Pharmacy Assistant, with 17 years and 10 months; and Tharanath, Senior Attender, with 13 years and 4 months of service were felicitated by the Director for their dedicated contribution to the institution. Shreyas, Pharmacist, was specially honoured for his commendable commitment to voluntary blood donation, having donated blood 27 times, reflecting the spirit of service that extends beyond his professional responsibilities. Expanded Pharmacy Services for Greater Patient Convenience

The celebration also highlighted the recently expanded Pharmacy facility at Father Muller Medical College Hospital. The new and spacious Pharmacy has been developed with the aim of providing greater convenience, accessibility and efficiency to both In-Patients (IP) and Out-Patients (OP).The expanded facility supports the institution's "One Roof, One Stop" approach, enabling patients and their attendants to access pharmaceutical services in a more organised and convenient environment. The expansion is intended to streamline the dispensing process, reduce waiting time and enhance the overall patient experience while ensuring that medicines are made available efficiently to the various departments and clinical services of the hospital. The programme was attended by Rev. Fr George Jeevan Sequeira, Administrator, Father Muller Medical College Hospital; Rev. Fr William Dsouza, Rev. Fr John Vas and Rev. Fr Ronald Lobo, Spiritual Animators; Dr Kishan Shetty, Additional Medical Superintendent, FMMCH; the HR Manager; Finance Officer; Senior Administrative Officer; Dr Manjunath, DTC Chairman; and the Liaison Officer, along with members of the Pharmacy Department and allied staff.The celebration served as a meaningful tribute to the pharmacists and pharmacy personnel of Father Muller, whose round-the-clock service, professional commitment and compassion continue to strengthen the institution's mission of healing and comforting those entrusted to its care. Sonali Rodrigues, Operation Executive of the pharmacy rendered the vote of thanks.

## PACE Biotechnology Students Shine at VTU Convocation; Three Secure Top Ranks



Students of the Department of Biotechnology at P.A. College of Engineering (PACE), Nadupadavu, Mangaluru, have brought immense pride to the institution by securing three top positions in the Visvesvaraya Technological University (VTU) rank list. At the 26th Annual Convocation of VTU, held at the university headquarters in Belagavi on September 26, 2026, Salila, a B.E. Biotechnology student of PACE, secured the First Rank in the university and was awarded the prestigious Gold Medal for her outstanding academic performance. Adding further glory to the institution, two other students from the same department also achieved remarkable positions in the VTU rank list. Vidya J. secured the Second Rank, while Ayisha Afra secured the Fifth Rank, reflecting the department's strong academic performance at the university level. The remarkable achievement of three students securing top ranks in the same discipline has brought considerable recognition to P. A. College of Engineering and stands as a testament to the students' academic excellence, commitment and sustained efforts. The Management, Principal and faculty members of P. A. College of Engineering extended their heartfelt congratulations to the three rank holders. They appreciated the students for their dedication, perseverance and exceptional academic performance, and expressed pride in their achievement, which has brought great honour and recognition to the institution.

## Saint Aloysius University Faculty Secures `Prestigious VGST K-FIST Grant'




The Departments of Postgraduate Studies and Research in Biochemistry and Botany, School of Life Sciences, Saint Aloysius (Deemed to be University), have been awarded the prestigious VGST K-FIST Level-I grant of Rs. 20 lakh by the Vision Group of Science and Technology (VGST), Government of Karnataka. The grant has been sanctioned for the research proposal titled "Establishment of an Institutional Facility for Nano-Bio-Environmental Research and Training (NBERT-AN): Biotechnological Valorization of Arecanut Waste for Safe Nano-Nutraceuticals."The project is led by Dr Remya Varadarajan, Assistant Professor, Department of Biochemistry, who is the Principal Investigator, with Dr Sana Sheikh of the Department of Botany serving as the Co-Investigator. The grant will be utilised over a period of two years to develop and strengthen research facilities at the University, providing enhanced opportunities for scientific research, innovation and training in the field of nano-bio-environmental sciences. The Management, Vice Chancellor and Research & Development Cell of Saint Aloysius University congratulated Dr Remya Varadarajan and Dr Sana Sheikh on securing the prestigious grant and appreciated their contribution towards promoting research and innovation at the University.

## `World Pharmacists Day' Celebrated at SCS Hospital



World Pharmacists Day was celebrated at SCS Hospital, Mangaluru, with the participation of the hospital's management, doctors, pharmacists, nurses and staff members. Speaking on the occasion, Dr Chandrashekar Sorake, Clinical Director and Head of the Department of Gastroenterology at SCS Hospital, highlighted the important role played by pharmacists in the safe and effective dispensing of medicines. He stressed the need to carefully examine and verify prescriptions before dispensing medications. Dr Chandrashekar Sorake also appreciated the initiative of providing medicines at discounted prices to eligible patients through the Pharmacy Discount Card, with the approval of the hospital management. Dr Jeevaraj Sorake, Managing Director and President of the hospital, inaugurated the programme by lighting the ceremonial lamp. Rama Sorake, Hospital Administrator; Dr Shalini Rao, Medical Superintendent; Gracy, Nursing Superintendent; and staff members from various departments of the hospital were present on the occasion. Senior Pharmacist L.N. Bhat Mali delivered the introductory remarks. The pharmacy team led the prayer and also conducted the proceedings and proposed the vote of thanks. Senior Pharmacist Nithish coordinated the programme. The hospital management conveyed its greetings and best wishes to all the pharmacists on the occasion of World Pharmacists Day.

## BJP Dakshina Kannada Education Cell Takes Shape; New Office-Bearers Inducted



The BJP Dakshina Kannada District Education Cell was formally constituted with the induction of its newly appointed office-bearers at a meeting held at the BJP District Office. The programme was conducted under the guidance of BJP Dakshina Kannada District President Satish Kumpala. During the meeting, the District President appointed the following members to various positions in the Education Cell, Vasanth Manjanady – District Convenor, Narayan Gowda Bantwal – Co-Convenor, Suresh Bhandary – Moodbidri, Vineeth Nair – Mangaluru North, Satyanarayana Bhat – Mangaluru South, Suresh M. S. – Belthangady, Manamohan – Sullia, Rajendra Master – Puttur., K. E. Babu – Mangaluru South Convenor, Vasanth Rai B. K. – Mangaluru Mandal Convenor. The meeting was attended by M.G. Bhat of Kumta, State Co-Convenor of the BJP Education Cell and State Co-In-charge of the BJP Seva Sankalpa 'Badalavaneya Kathe' (Story of Change) initiative. He called upon members of the Education Cell to actively participate in the activities of the initiative and provided guidance on the formation and functioning of district- and mandal-level committees. Sudheer Shetty Kannur, Coordinator of the BJP Cells of Dakshina Kannada district, and Murali Hosamajalu, Member of the Karnataka State BJP Education Cell and In-charge of the Dakshina Kannada Education Cell, were also present. They shared their suggestions and guidance with the newly constituted team. The programme concluded with a vote of thanks delivered by Vasanth Kumar Manjanady, District Convenor of the BJP Education Cell.

